# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಪೂರ್ವ) ವಲಯ

## ಶಿವಾಜಿನಗರ ವಿಭಾಗ, ವಸಂತನಗರ ಉಪವಿಭಾಗ

ಮಾನ್ಯ ಆಯುಕ್ತರು ಬಿಬಿಎಂಪಿ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/2020-21 ದಿನಾಂಕ:21-09-2020 ರ ಆದೇಶದಂತೆ ದಿನಾಂಕ:22-04-2022 ರಂದು ವಾರ್ಡ್ ಸಂಖ್ಯೆ:110 ಸಂಪಂಗಿರಾಮನಗರ, ಹಳೆ ಪಲ್ಲವಿ ಟಾಕೀಸ್ ಪಕ್ಕ, ರಾಜಾರಾಮ್ ಮೋಹನ್‌ರಾಯ್ ರಸ್ತೆ ಬೆಂಗಳೂರು ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು.

**ಸಭೆಗೆ ಹಾಜರಾದವರು.**

| ಕ್ರಮ ಸಂಖ್ಯೆ: | ಹೆಸರು | ಸಮಿತಿ ಸಭೆಯ | ಮೊಬೈಲ್ ಸಂಖ್ಯೆ |
|---|---|---|---|
| 1 | ಶ್ರೀ. ರಮೇಶ್ | ನೋಡಲ್ ಅಧಿಕಾರಿಗಳು | |
| 2 | ಶ್ರೀ. ಚಿಕ್ಕಗೂಳಿಗೌಡ ಜೆ.ಜಿ | ಸಹಾಯಕ ಅಭಿಯಂತರರು | |
| 3 | ಶ್ರೀ. ಲಕ್ಷ್ಮೀನಾರಾಯಣ | ಕೆಲಸ ಪರಿವೀಕ್ಷಕರು | |
| 4 | ಶ್ರೀ. ಚಿಕ್ಕಣ್ಣ | ಕಿರಿಯ ಅಭಿಯಂತರರು (ಬೆಸ್ಕಾಂ) | |
| 5 | ಶ್ರೀ. ಸಂದೀಪ್ | ಸಹಾಯಕ ಅಭಿಯಂತರರು (Electrical) | |
| 6 | ಶ್ರೀ. ಎನ್. ಈರಣ್ಣ | ಹಿರಿಯ ಆರೋಗ್ಯ ನಿರೀಕ್ಷಕರು (ಬಿಬಿಎಂಪಿ) | |
| 7 | ಶ್ರೀ. ಶ್ರೀನಿವಾಸ್ | ಕಿರಿಯ ಆರೋಗ್ಯ ನಿರೀಕ್ಷಕರು (ಬಿಬಿಎಂಪಿ) | |
| 8 | ಶ್ರೀ. ಕಮಲ್ | ಕಂದಾಯ ವಸೂಲಿಗಾರರು | |
| 9 | ಶ್ರೀ. ಬಾಲಕೃಷ್ಣ | ಕಂದಾಯ ಪರಿವೀಕ್ಷಕರು | |
| 10 | ಶ್ರೀ. ಕೆ.ಹೆಚ್ ರಾಮಲಿಂಗರೆಡ್ಡಿ | ಸಂಪಂಗಿರಾಮನಗರ ಅಧ್ಯಕ್ಷರು ಸೇವ ಸಮಿತಿ | |
| 11 | ಶ್ರೀ. ಅಮಿತ್ ರಾಜ್ ವೈ | ಸಾರ್ವಜನಿಕರು | |
| 12 | ಶ್ರೀ. ಪ್ರಕಾಶ್ ನೆಡುಂಗಡಿ | ಎನ್.ಜಿ.ಓ | |
| 13 | ಶ್ರೀ. ಧನರಾಜ್ | ಸಾರ್ವಜನಿಕರು | |
| | | | |

**ಸಭೆಯಲ್ಲಿ ಚರ್ಚಿಸಿರುವ ವಿಷಯಗಳು**

1) ವಾರ್ಡ್ ಸಂಖ್ಯೆ:110 ರ ಮೊದಲನೇ ಮುಖ್ಯರಸ್ತೆ ರಸ್ತೆ ಹಾಳಾಗಿದ್ದು ಈ ರಸ್ತೆಯನ್ನು ಪಲವಾರು ಅಪಘಾತಗಳು ಸಂಭವಿಸುತ್ತಿವೆ ಎಂದು ಸಭೆಯಲ್ಲಿ ತಿಳಿಸಿದರು.

   ಕ್ರಮ: ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಬಿಡ್ಲೂಎಸ್ಎಸ್‌ಬಿ) ರವರಿಗೆ ಸದರಿ ವಿಷಯದ ಬಗ್ಗೆ ಕ್ರಮವಹಿಸಲು ಸೂಚಿಸಲಾಯಿತು.

2) ಗಂಗಾಧರ್‌ಚೆಟ್ಟಿ ರಸ್ತೆ ರಸ್ತೆಯ ಹಾಳಾಗಿದ್ದು ರಸ್ತೆಯನ್ನು ಸರಿಪಡಿಸುವಂತೆ ಸಭೆಯಲ್ಲಿ ತಿಳಿಸಲಾಯಿತು.

   ಕ್ರಮ: ಸಹಾಯಕ ಅಭಿಯಂತರವರು ಈ ರಸ್ತೆಯ ಕಾಮಗಾರಿಗೆ ಟೆಂಡರ್ ಕರೆಯಲಾಗಿದ್ದು, ಕಾರ್ಯದೇಶ ನೀಡಿದ ನಂತರ ರಸ್ತೆ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದೆಂದು ತಿಳಿಸಿದರು.

Scanned with CamScanner

3) ವಾರ್ಡ್ ಸಂಖ್ಯೆ:110 ರ ಹಾಸ್ಪಿಟಲ್ ರಸ್ತೆಯಲ್ಲಿ ರಸ್ತೆ ಸರಿಪಡಿಸುವಂತೆ ತಿಳಿಸಿದರು.

ಕ್ರಮ: ಸ್ಮಾರ್ಟ್ ಸಿಟಿಯವರು ಕಾಮಗಾರಿಯನ್ನು ನಿರ್ವಹಿಸುತ್ತಿದ್ದು, ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದೆಂದು ತಿಳಿಸಿದರು.

4) ವಾರ್ಡ್ ಸಂಖ್ಯೆ:110 ರ ರಸ್ತೆ ಗುಂಡಿಗಳನ್ನು ಮುಚ್ಚುವಂತೆ ತಿಳಿಸಿಲಾಯಿತು

ಕ್ರಮ: ಸಹಾಯಕ ಅಭಿಯಂತರರು ರಸ್ತೆ ಗುಂಡಿಗಳನ್ನು ಮುಚ್ಚಲಾಗಿದೆ ಎಂದು ತಿಳಿಸಿದರು.

5) ವಾರ್ಡ್ ಸಂಖ್ಯೆ:110 ರ 8ನೇ ಕ್ರಾಸ್ ಸಂಪಂಗಿರಾಮನಗರದ ಶೌಚಾಲಯವನ್ನು ದುರಸ್ಥಿಗೊಳಿಸುವಂತೆ ತಿಳಿಸಲಾಯಿತು.

ಕ್ರಮ: ಸಹಾಯಕ ಅಭಿಯಂತರರು ಪರಿಶೀಲಿಸಿ ಕ್ರಮ ವಹಿಸಲಾಗುವುದೆಂದು ತಿಳಿಸಿದರು.

6) ವಾರ್ಡ್ ಸಂಖ್ಯೆ:110 ರ 1ನೇ ಕ್ರಾಸ್ ರಸ್ತೆ ಸಂಪಂಗಿರಾಮನಗರ Pay & use ಶೌಚಾಲಯದಲ್ಲಿ ನೀರಿನ ತೊಂದರೆ ಇದೆ ಎಂದು ತಿಳಿಸಿದರು.

ಕ್ರಮ: ಸಹಾಯಕ ಅಭಿಯಂತರರು ಪರಿಶೀಲಿಸಿ ಕ್ರಮವಹಿಸಲಾಗುವುದೆಂದು ತಿಳಿಸಿದರು.

7) ವಾರ್ಡ್ ಸಂಖ್ಯೆ:110 ರ ಅಂಗನವಾಡಿಯಲ್ಲಿ ಶೌಚಾಲಯಕ್ಕೆ ನೀರಿನ ಸಂಪರ್ಕ ಇಲ್ಲವೆಂದು ತಿಳಿಸಿದರು.

ಕ್ರಮ: ಸಹಾಯಕ ಅಭಿಯಂತರರು ಪರಿಶೀಲಿಸಿ ಕ್ರಮ ವಹಿಸಲಾಗುವುದೆಂದು ತಿಳಿಸಿದರು.

8) **ವಾರ್ಡ್ ಸಂಖ್ಯೆ:**110 ರ 4ನೇ ಮುಖ್ಯರಸ್ತೆಯ 4ನೇ ಕ್ರಾಸ್‌ನಿಂದ 16ನೇ ವರೆಗೆ ಚರಂಡಿಯಲ್ಲಿ ನೀರು ಸರಾಗವಾಗಿ ಹರಿಯುತ್ತಿಲ್ಲವೆಂದು ತಿಳಿಸಿದರು.

ಕ್ರಮ: SWD ಸಹಾಯಕ ಕಾರ್ಯನಿರ್ವಾಹಕ ಅಭಿಯಂತರವರಿಗೆ ಕ್ರಮಕಗೈಗೊಳ್ಳುವಂತೆ ಸೂಚಿಸಲಾಯಿತು.

9) ವಾರ್ಡ್ ಸಂಖ್ಯೆ:110 ಪ್ಲೇನ್ ಸ್ಟ್ರೀಟ್‌ನಲ್ಲಿ ಮತ್ತು 11ನೆ ಕ್ರಾಸ್ ಸಂಪಂಗಿರಾಮನಗರ 8ನೇ ಕ್ರಾಸ್ 1ನೇ ಮುಖ್ಯರಸ್ತೆ ರಸ್ತೆ ದೀಪಗಳು ಉರಿಯುತ್ತಿಲ್ಲವೆಂದು ತಿಳಿಸಿನರು.

ಕ್ರಮ: ಸಹಾಯಕ ಅಭಿಯಂತರರು(Electrical) ರವರಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಿಸಲು ಸೂಚಿಸಲಾಯಿತು.

10) ವಾರ್ಡ್ ಸಂಖ್ಯೆ:110 ರ ಬನ್ನಪ್ಪ ಪಾರ್ಕ್ ಪಾತ್‌ವೇ ಚಿಲ್ಡ್ರಿನ್ ಎಕ್ವೂಪಮೆಂಟ್ಸ್ ಹಾಳಾಗಿದ್ದು ಸರಿಪಡಿಸುವಂತೆ ಸೂಚಿಸಲಾಯಿತು.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು (ತೋಟಗಾರಿಕೆ) ರವರಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಿಸಲು ಸೂಚಿಸಲಾಯಿತು

11) ವಾರ್ಡ್ ಸಂಖ್ಯೆ:110 ರ ರಾಜಾರಾಮ್‌ಮೋಹನ್ ರಾಯ್ ರಸ್ತೆಯಲ್ಲಿ ಬಿ.ಎಂ.ಟಿ.ಸಿ ನಿಲ್ಲಿಸುತ್ತಿಲ್ಲವೆಂದು ತಿಳಿಸಿದರು.

ಕ್ರಮ: ಸಹಾಯಕ ಅಭಿಯಂತರರು ಬಿ.ಎಂ.ಟಿ.ಸಿ ಯ ಸಂಬಂಧಪಟ್ಟ ಅಧಿಕಾರಿಗಳಿಗೆ ಪತ್ರ ಬರೆಯಲಾಗುವುದೆಂದು ತಿಳಿಸಿದರು.

12) ವಾರ್ಡ್ ಸಂಖ್ಯೆ:110 ರಲ್ಲಿ ಸಿಸಿಟಿವಿ ಗಳಿಗೆ ಕರೆಂಟ್ ಸಪ್ಲೆ ಇಲ್ಲವೆಂದು ತಿಳಿಸಿದರು.

ಕ್ರಮ: ಸಹಾಯಕ ಅಭಿಯಂತರರು (Electrical) ರವರಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಿಸಲು ಸೂಚಿಸಲಾಯಿತು.

Scanned with CamScanner

13) ವಾರ್ಡ್ ಸಂಖ್ಯೆ:110 ರ ಅಲಿಆಸ್ಕರ್ ರಸ್ತೆಯಲ್ಲಿ ಸ್ವಚ್ಛತೆಯನ್ನು ಮಾಡುವಂತೆ ಸೂಚಿಸಲಾಯಿತು.

ಕ್ರಮ:ಕಿರಿಯ ಆಗೋಗ್ಯ ಪರಿವೀಕ್ಷಕವರಿಗೆ ಸದರಿ ವಿಷಯದ ಬಗ್ಗೆ ಕ್ರಮವಹಿಸಲು ಸೂಚಿಸಲಾಯಿತು.

14) ವಾರ್ಡ್ ಸಂಖ್ಯೆ:110 ರ ಪಾಂಗಿಂಗ್ ಮಾಡುತ್ತಿಲ್ಲವೆಂದು ತಿಳಿಸಿದರು.

ಕ್ರಮ: ಹಿರಿಯ ಆಗೋಗ್ಯ ಪರಿವೀಕ್ಷಕವರಿಗೆ ಸದರಿ ವಿಷಯದ ಬಗ್ಗೆ ಕ್ರಮವಹಿಸಲು ಸೂಚಿಸಲಾಯಿತು.

15) ಅಧ್ಯಕ್ಷರು ಸಮಿತಿಯಲ್ಲಿ ಎಲ್ಲಾ ಸದಸ್ಯರಿಗೂ ಮೇಲ್ಕಂಡ ವಿಷಯಗಳನ್ನು ತಿಳಿಸುತ್ತಾ, ನಿರ್ಣಯಿಸಲು ಕೋರಿದರು. ಸಮಿತಿಯ ಸದಸ್ಯರು ಒಪ್ಪಿಗೆ ನೀಡುತ್ತಾ, ನಿರ್ಣಯಗಳನ್ನು ಅಂಗೀಕರಿಸಿ ಮೇಲಾಧಿಕಾರಿಗಳಿಗೆ ಕ್ರಮವಹಿಸಲು ತಿಳಿಸಿದರು.

16) ಸಮಿತಿಯ ಕಾರ್ಯದರ್ಶಿಯವರು ಸಭೆಗೆ ಹಾಜರಾದ ಎಲ್ಲರಿಗೂ ವಂದನೆಗಳನ್ನು ತಿಳಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| ಸದಸ್ಯ ಕಾರ್ಯದರ್ಶಿಗಳು | ಮಾನ್ಯ ನೋಡಲ್ ಅಧಿಕಾರಿಗಳು |
| ವಾರ್ಡ್–110 ಸಂಪಂಗಿರಾಮನಗರ | ವಾರ್ಡ್-110, ಸಂಪಂಗಿರಾಮನಗರ |
| ಬಿ.ಬಿ.ಎಂ.ಪಿ | ಬಿ.ಬಿ.ಎಂ.ಪಿ |

ಪ್ರತಿಗಳನ್ನು:

1) ಮಾನ್ಯ ಆಡಳಿತಗಾರರ ಆಪ್ತ ಕಾರ್ಯದರ್ಶಿ ರವರ ಅವಗಾಹನೆಗೆ ಕಳುಹಿಸಲಾಗಿದೆ.
2) ಮಾನ್ಯ ಮುಖ್ಯ ಆಯುಕ್ತರು ರವರ ಆಪ್ತ ಕಾರ್ಯದರ್ಶಿ ರವರ ಅವಗಾಹನೆಗೆ ಕಳುಹಿಸಲಾಗಿದೆ.
3) ಮಾನ್ಯ ವಿಶೇಷ ಆಯುಕ್ತರು (ಆಡಳಿತ) ರವರ ಆಪ್ತ ಕಾರ್ಯದರ್ಶಿ ರವರ ಅವಗಾಹನೆಗೆ ಕಳುಹಿಸಲಾಗಿದೆ
4) ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗೆ ಕಳುಹಿಸಲಾಗಿದೆ
5) ಮುಖ್ಯ ಅಭಿಯಂತರರು (ಪೂರ್ವ) ರವರ ಅವಗಾಹನೆಗೆ ಕಳುಹಿಸಲಾಗಿದೆ
6) ಕಾರ್ಯಪಾಲಕ ಅಭಿಯಂತರರು (ಶಿವಾಜಿನಗರ) ರವರ ಅವಗಾಹನೆಗೆ ಕಳುಹಿಸಲಾಗಿದೆ
7) ಕಛೇರಿ ಕಡತಕ್ಕೆ.

Scanned with CamScanner